ಶ್ರೀ ಸಿದ್ದರಾಮಯ್ಯ :— ಮಾನ್ಯ ಅಧ್ಯಕ್ಷರೆ, ಆಕ್ಟ್ರಾಯ್ ಗ್ರಾಂಟ್ ಕೊಟ್ಟಿಲ್ಲವೆಂದು ಮಾನ್ಯ ಸದಸ್ಯರುಗಳು ಹೇಳಿದರೆ ಈಗ ಆಕ್ಟ್ರಾಯಿ ಗ್ರಾಂಟ್ ಎಂದು ಇಲ್ಲವೇ ಇಲ್ಲ. ಹಾಗಾಗಿ ಆಕ್ಟ್ರಾಯಿ ಗ್ರಾಂಟ್ ಎಂದು ಕೊಡುವುದೂ ಇಲ್ಲ.

ಅಧ್ಯಕ್ಷರು :— ಮಾನ್ಯ ಹಣಕಾಸಿನ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ - ಆಕ್ಟ್ರಾಯಿ ಗ್ರಾಂಟ್ ಎನ್ನತಕ್ಕಂಥದ್ದು ಇವತ್ತು ಪದ್ಧತಿಯಲ್ಲಿ ಇಲ್ಲ. ಯಾವ ಗ್ರಾಂಟ್ ಬರಬೇಕಾಗಿತ್ತೋ ಅದು ಬಂದಿಲ್ಲವೆಂದು ಖಚಿತವಾಗಿ ಹೇಳಿದರೆ ಆ ಗ್ರಾಂಟ್ ಕೊಡುವ ಬಗ್ಗೆ ಅವರು ಹೇಳುತ್ತಾರೆ.

ಶ್ಕೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಡಾ: ತಿಮ್ಮಯ್ಯನವರ ವರದಿ ಪ್ರಕಾರ ಪ್ರತಿಯೊಂದು ಮಹಾನಗರಸಭೆಗೆ ಪ್ರತಿ ವರ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡುತ್ತಾರೆ. ಅದರಂತೆ ಕಳೆದ ವರ್ಷ 21 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ನಮ್ಮ ಮಹಾನಗರಸಭೆಗೆ ಬಿಡುಗಡೆ ಮಾಡಿದ್ದರು. ಈ ವರ್ಷ ಲೆಕ್ಕ ಮಾಡಿದ ಪ್ರಕಾರ 24 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಇಲ್ಲಿಯವರೆಗೆ 12 ರಿಂದ 13 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಇನ್ನುಳಿದ ಸುಮಾರು 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಅದನ್ನು 31ನೇ ಮಾರ್ಚ್ 1999ರ ಒಳಗಾಗಿ ಬಿಡುಗಡೆ ಮಾಡಬೇಕು.

ಶ್ರೀ ಸಿದ್ದರಾಮಯ್ಯ :— ಮಾನ್ಯ ಅಧ್ಯಕ್ಷರೆ ಪ್ರತೀ ತಿಂಗಳು ಸರ್ಕಾರದಿಂದ ಅವರಿಗೆ ಕೊಡತಕ್ಕಂಥದ್ದು ಹನ್ನೆರಡರಲ್ಲಿ ಒಂದು ಭಾಗ ಅಮೌಂಟನ್ನು ಲೋಕಲ್ ಬಾಡೀಸ್ ಮತ್ತು ಪಂಚಾಯತ್ ಸದಸ್ಯರುಗಳಿಗೆ ಕೊಟ್ಟುಬಿಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಹುಬ್ಬಳ್ಳಿ-ಧಾರವಾಡ ಮಹಾನಗರಸಭೆಗೆ ಏನಾದರೂ ಕೊಡಬೇಕಾಗಿರುವ ಹಣ ಉಳಿದಿದ್ದರೆ ಅದನ್ನು ಕೊಡಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ.

(ಐ) ಹಾಸನ ಜಿಲ್ಲಾ ಉಸ್ತುವಾರಿ ಸಚಿವರ ಗೈರುಹಾಜರಿ.

+ ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :— ಮಾನ್ಯ ಅಧ್ಯಕ್ಷರೆ, ಹಾಸನ ಜಿಲ್ಲಾ ಉಸ್ತಿವಾರಿ ಮಂತ್ರಿಯವರು ಸದನದಲ್ಲಿ ಕಾಣುತ್ತಿಲ್ಲ. ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಟ್ಟಿದ್ದಾರೆ ಎನ್ನುವ ವದಂತಿಯನ್ನು ಪತ್ರಿಕೆಗಳಲ್ಲಿ ನಾವು ಓದಿದ್ದೇವೆ. ಅವರ ಬಗ್ಗೆ ಸದನದಲ್ಲಿ ಪ್ರಸ್ತಾಪ ಮಾಡಿದಾಗ 'ಅವರಿಗೆ ಆರೋಗ್ಯ ಸರಿಯಿಲ್ಲದ ಕಾರಣ ರಜದ ಮೇಲೆ ಹೋಗಿದ್ದಾರೆ' ಎಂದು ಮಾನ್ಯ ಅಧ್ಯಕ್ಷರಾದ ತಾವು ನಮಗೆ ತಿಳಿಸಿದಿರಿ. ಜಿಲ್ಲಾ ಉಸ್ತುವಾರಿ ಮೌತ್ರಿಗಳ ಆರೋಗ್ಯ ವಿಚಾರಣೆ ಮಾಡುವಂಥ ಸಂದರ್ಭದಲ್ಲಿ ಸದನದಲ್ಲಿ ಅವರು ಇಲ್ಲ. ಹಾಸನದಲ್ಲಿ ಅವರ ಮನೆಗೆ ದೂರವಾಣಿ

ಮುಖಾಂತರ ಸಂಪರ್ಕ ಮಾಡಿದಾಗ ಅವರು ಅಲ್ಲಿಯೂ ಇರಲಿಲ್ಲ. ಮಂತ್ರಿಯವರು ಹಾಸನದಲ್ಲಿಯೇ ಇದ್ದಾರೆಂದು ಒಂದೂ ದೂರವಾಣಿ ಸಂಖ್ಯೆಯನ್ನು ಅವರ ಮನೆಯವರು ಕೊಟ್ಟರು. ಆ ಸಂಖ್ಯೆಗೆ ಫೋನ್ ಮಾಡಿ ಕೇಳಿದರೆ ಅದು ಜಿಲ್ಲಾಧಿಕಾರಿಯವರ ಕಛೇರಿಯ ದೂರವಾಣಿ ಸಂಖ್ಯೆ ಆಗಿತ್ತು. ಜಿಲ್ಲಾ ಉಸ್ತುವಾರಿ ಮಂತ್ರಿಯವರ ಬಗ್ಗೆ ಜಿಲ್ಲಾಧಿಕಾರಿಯವರ ಕಛೇರಿಯನ್ನು ಕೇಳಿದಾಗ ಅವರು ಏನು ಹೇಳುತ್ತಾರೆಂದರೆ -ಜಿಲ್ಲಾ ಸಮೀಕ್ಷೆಯಲ್ಲಿದ್ದಾರೆ ಈಗ ಅವರು ಸಿಗುವುದಿಲ್ಲ ಎಂದು. 'ಅವರು ಬಹಿರಂಗ ಸಭೆಗಳಲ್ಲಿ ಕಾರ್ಯಕ್ರಮ ನಡೆಸಿಕೊಡುತ್ತಿರುವಂಥದ್ದು ಫೋಟೋ ಸಮೇತ ಪತ್ರಿಕೆಗಳಲ್ಲಿ ಬರುತ್ತಿದೆ. ಅವರು ಹಾಸನ ಜಿಲ್ಲೆಯಲ್ಲಿ ಸಮೀಕ್ಷೆ ನಡೆಸುತ್ತಿದ್ದಾರೆ. ಎಂದು ಪ್ರಜಾವಾಣಿ ಪತ್ರಿಕೆಯಲ್ಲಿ ಕೂಡ ವರ್ತಮಾನ ಬಂದಿದೆ. ಹಾಗಾದರೆ 'ಅವರ ಆರೋಗ್ಯ ಸರಿಯಿಲ್ಲವೆಂದು' ಸದನಕ್ಕೆ ಕೊಟ್ಟಿರತಕ್ಕಂಥ ಮಾಹಿತಿ ತಪ್ಪಾಗುತ್ತದೆ. ಇದರ ಸಮಾಚಾರ ಏನು? ಇವರು ರಾಜೀನಾಮೆ ಕೊಟ್ಟಿದ್ದಾರೆಯೇ? ಅಥವಾ ಆರೋಗ್ಯ ಸರಿಯಿಲ್ಲವೆಂದು ಸದನಕ್ಕೆ ಬರಲಿಲ್ಲವೇ?. ಆರೋಗ್ಯ ಸರಿಯಿಲ್ಲದಿದ್ದರೂ ಸಹ ಅವರು ಸರ್ಕಾರಿ ಕಾರನ್ನು ಉಪಯೋಗಿಸುತ್ತಿಲ್ಲ. ಖಾಸಗಿ ಕಾರಿನಲ್ಲಿ ಜಿಲ್ಲೆಯಾದ್ಯಂತ ಸುತ್ತಾಡುತ್ತಿದ್ದಾರೆ. ಖಾಸಗಿ ಕಾರಿನಲ್ಲಿ ಅವರು ಓಡಾಡುತ್ತಿದ್ದರೂ ಕೂಡ ಸರ್ಕಾರಿ ಕಾರು ಅವರ ಹಿಂದೆ ಖಾಲಿ ಹೋಗುತ್ತದೆ. ಏತಕ್ಕೆ ಎಂದು ಗೊತ್ತಿಲ್ಲ. ಇದೆಲ್ಲಾ ಆದಮೇಲೆ ಜಿಲ್ಲೆಯಲ್ಲಿ ನಮ್ಮ ಗಾಬರಿಗೆ ಕಾರಣವೇನೆಂದರೆ- ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳ ಕಾರ್ಯವಿಧಾನವೇ ಬೇರೆ. ಸರ್ಕಾರಿ ಕಾರನ್ನು ಅವರು ಉಪಯೋಗಿಸುತ್ತಿಲ್ಲ, ಖಾಸಗಿ ಕಾರಿನಲ್ಲಿ ಅವರು ಓಡಾಡುತ್ತಿದ್ದಾರೆ ಆದರೂ ಸಹ ಸರ್ಕಾರಿ ಕಾರು ಅವರ ಹಿಂದೆ ಹೋಗುತ್ತದೆ.

ಶ್ರೀ ಬಿ ಶಿವರಾಮು :— ಮಾನ್ಯ ಅಧ್ಯಕ್ಷರೆ ಖಾಸಗಿ ಕಾರಿನಲ್ಲಿ ಹೋದರೂ ಕೂಡ ಜೊತೆಗೆ ಎಲ್ಲಾ ಹಿರಿಯ ಅಧಿಕಾರಿಗಳು ಮಂತ್ರಿಗಳ ಹಿಂದುಗಡೆಯೇ ತಿರುಗುತ್ತಿದ್ದಾರೆ. ಡಿ.ಸಿ. ಆಫೀಸ್‌ನಲ್ಲಿ ಮಾತ್ರ ಮೀಟಿಂಗ್‌ಗಳು ನಡೆಯುತ್ತಲೇ ಇವೆ.

ಶ್ರೀ ಬಿ.ಬಿ. ಶಿವಪ್ಪ :— ನಮಗೆ ಗಾಬರಿ ಏನಿದೆಯೆಂದರೆ -ಜಿಲ್ಲಾಧಿಕಾರಿ, ಪೊಲೀಸ್ ವರಿಷ್ಠಾಧಿಕಾರಿ ಹೀಗೆ ಇತರೇ ಅಧಿಕಾರಿಗಳನ್ನು ಕರೆಸಿ 'ಯಾರು ಏನೇ ಹೇಳಿದರೂ ಕೂಡ ನೀವು ಕೇಳಕೂಡದು, ನಮ್ಮ ಆಡಳಿತ ಪಕ್ಷದ ತಾಲ್ಲೂಕು ಅಧ್ಯಕ್ಷರು, ಜಿಲ್ಲಾ ಅಧ್ಯಕ್ಷರು, ಯಾವ ಕೆಲಸ ಹೇಳುತ್ತಾರೋ ಅದೇ ಕೆಲಸ ಮಾಡಬೇಕು' ಎಂದು ಬಹಿರಂಗವಾಗಿ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದಾರೆ. ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ -ನ್ಯಾಯಬೆಲೆ ಅಂಗಡಿಗಳನ್ನು ಹಂಚಬೇಕಾದರೆ ಸ್ಥಳೀಯ ಶಾಸಕರ ಒಂದು ವರದಿಯನ್ನು ಕೇಳುತ್ತಾರೆ. ಶಾಸಕರು ಕೂಡ ಯಾರಿಗೆ ಕೊಡಬೇಕೆಂದು ಹೇಳುತ್ತಾರೆ. ಅದರಂತೆ 4-5 ಅರ್ಜಿಗಳು ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವುದಕ್ಕೆ ಬಂದಿದ್ದು, ಎಲ್ಲಾ ಸಮೀಕ್ಷೆ ಮಾಡಿ ನಾನು ಮೂರು ಅರ್ಜಿಗಳನ್ನು

ಸೆಲೆಕ್ಟ್ ಮಾಡಿ ಕೊಟ್ಟಿ. ಇಂಥವರಿಗೆ ಕೊಡಬೇಕೆಂದು ಸನ್ಮಾನ್ಯ ಆಹಾರ ಮಂತ್ರಿಯವರಿಂದ ಪತ್ರ ಕೂಡ ಬರೆಸಿದೆ. ಆದರೆ ಡಿ.ಸಿ.ಯವರಿಂದ ಅಥವಾ ಎಸ್.ಪಿ.ಯವರಿಂದ ಕೊಡುವುದಕ್ಕೆ ಆಗುವುದಿಲ್ಲ. ಅವರು ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಅಧಿಕಾರಿಗಳು ಕಛೇರಿಯಲ್ಲಿ ಯಾವ ಫೈಲ್ ಕೂಡ ನೋಡದೆ ಅದೆಲ್ಲವನ್ನೂ ಹಿಡಿದುಕೊಂಡು ಮಂತ್ರಿಗಳ ಊರಿಗೆ ಹೋಗುತ್ತಿದ್ದರು, ಇದು ನಡೆಯುತ್ತಾ ಇತ್ತು. ಈಗಲೂ ಅವರು ಮಂತ್ರಿಯಾಗಿಯೇ ಉಳಿದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಏನು ಹೇಳುತ್ತೀರೋ ಗೋತ್ತಿಲ್ಲ. ಆದರೆ ಈಗ ಅವರು ಸದನಕ್ಕೆ ಬರಲಿಲ್ಲವೆಂದು ಗೊತ್ತು. ಅಂದಮೇಲೆ ಅವರು ಸದನಕ್ಕೂ ಬರುವುದಿಲ್ಲ ರಾಜೀನಾಮೆ ಕೊಟ್ಟಿದ್ದಾರೆ. ಹೀಗೆ ಎರಡು ಅಂಶ ಇದೆ. ಅವರಿಗೆ ಕಾಯಿಲೆ ಇದ್ದು ಆರೋಗ್ಯ ಸರಿಯಿಲ್ಲವೆಂದು ಮಾನ್ಯ ಅಧ್ಯಕ್ಷರು ಹೇಳಿದ್ದಾರೆ. ಆದರೆ ಅವರ ಕಾರ್ಯಕ್ರಮ ಜಿಲ್ಲೆಯಲ್ಲಿ ಪ್ರತಿನಿತ್ಯ ನಡೆಯುತ್ತಲೇ ಇದೆ. ಎರಡು ದಿವಸ ಸತತವಾಗಿ ಬೆಳಿಗ್ಗೆಯಿಂದ ಸಂಜೆವರೆಗೆ ಡಿ.ಸಿ. ಆಫೀಸ್‌ನಲ್ಲಿ ಇವರು ಏನು ಸಮೀಕ್ಷೆ ನಡೆಸುತ್ತಾರೆ? ಅಲ್ಲಿ ಏನು ಸಮೀಕ್ಷೆ ನಡೆಯುತ್ತದೆ? ಇದಕ್ಕೆ ಸರಿಯಾದಂಥ ಉತ್ತರ ಕೊಡಬೇಕು. ಜಿಲ್ಲಾ ಉಸ್ತುವಾರಿ ಮಂತ್ರಿಗಳ ಆರೋಗ್ಯ ಸರಿ ಇರಬೇಕೆಂದು ನನ್ನ ಅಪೇಕ್ಷೆ. ಮತ್ತು ಅವರು ಆರೋಗ್ಯವಾಗಿರಲೆಂದು ಭಗವಂತನಲ್ಲೂ ಪ್ರಾರ್ಥನೆ ಮಾಡುತ್ತೇನೆ. ಅವರ ಆರೋಗ್ಯ ಸರಿ ಇಲ್ಲದಿದ್ದರೆ ಅದನ್ನು ಸರಿಪಡಿಸತಕ್ಕಂಥ ವ್ಯವಸ್ಥೆಯನ್ನು ಸರ್ಕಾರದ ಕಡೆಯಿಂದ ಮಾಡಬೇಕಲ್ಲವೇ?

ಶ್ರೀ ಬಿ. ಶಿವರಾಮು :— ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲದಿದ್ದರೆ ನಮ್ಮ ಜಿಲ್ಲೆಯ ಪರಿಸ್ಥಿತಿ ಏನು? ಬೇರೆ ಬೇರೆ ಜಿಲ್ಲೆಗೆ 2-3 ಜನ ಮಂತ್ರಿಗಳು ಉಸ್ತಿವಾರಿ ಮಂತ್ರಿಗಳಿದ್ದಾರೆ. ನಮ್ಮ ಜಿಲ್ಲೆಗೆ ಒಬ್ಬರು ಮಾತ್ರ ಇದ್ದಾರೆ.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಅಧ್ಯಕ್ಷರೆ ಹಾಸನ ಜಿಲ್ಲೆಯನ್ನು ನೋಡಿಕೊಳ್ಳುವುದಕ್ಕೆ ಭಗವಂತನಾದ ಶ್ರವಣಬೆಳಗೊಳದ ಶ್ರೀ ಗೊಮ್ಮಟೇಶ್ವರ ಇದ್ದಾರೆ.

ಶ್ರೀ ಸಿದ್ದರಾಮಯ್ಯ :— ಮಾನ್ಯ ಅಧ್ಯಕ್ಷರೆ, ಅವರು ನನಗೆ ಭೇಟಿ ಆಗಿಲ್ಲ. ನನಗೆ ಗೊತ್ತಿರುವ ಮಟ್ಟಿಗೆ ಸ್ವಲ್ಪ ಅನಾರೋಗ್ಯ ಇದೆಯೆಂದು ಹೇಳಿ ಅವರು ಕಾಗದ ಬರೆದಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ರಾಜಕೀಯ ಆರೋಗ್ಯ ಸರಿಯಿಲ್ಲವೋ ಅಥವಾ ಶಾರೀರಿಕ ಆರೋಗ್ಯ ಸರಿ ಇಲ್ಲವೋ?

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ಸೋಮವಾರ ಬೆಳಿಗ್ಗೆ 10 ಗಂಟೆಗೆ ಸ್ವತಃ ನಾನೇ ಚನ್ನರಾಯಪಟ್ಟಣದಲ್ಲಿ ಮಂತ್ರಿಗಳನ್ನು ನೋಡಿದ್ದೇನೆ.

ಶ್ರೀ ಸಿದ್ದರಾಮಯ್ಯ :— ಇದಕ್ಕೆ ಶ್ರೀ ರೇವಣ್ಣನವರೇ ಉತ್ತರ ಕೊಡಬೇಕಾಗುತ್ತದೆ. ಅವರು ಬಂದಮೇಲೆ ಉತ್ತರ ಕೊಡುತ್ತಾರೆ.

ಶ್ರೀ ಬಿ.ಬಿ. ಶಿವಪ್ಪ :— ಮಾನ್ಯ ಅಧ್ಯಕ್ಷರೆ, ಶ್ರೀ ರೇವಣ್ಣನವರು ರಾಜೀನಾಮೆ ಪತ್ರವನ್ನು ಮಾನ್ಯ ಸಿದ್ದರಾಮಯ್ಯನವರ ಕೈಯಲ್ಲಿಯೇ ಕೊಟ್ಟಿದ್ದಾರೆಂದು ಒಂದು ಪ್ರಮುಖ ಪತ್ರಿಕೆಯಲ್ಲಿ ಬಂದಿದೆ. ನನಗೆ ಗೊತ್ತಿಲ್ಲವೆಂದು ಈಗ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ :— ಶ್ರೀ ರೇವಣ್ಣನವರು ನನಗೆ ರಾಜೀನಾಮೆ ಪತ್ರವನ್ನು ಕೊಟ್ಟಿಲ್ಲ. ಅವರಿಗೆ ಆರೋಗ್ಯ ಸರಿಯಿಲ್ಲವೆಂದು ನನಗೆ ಗೊತ್ತಿದೆ ಮತ್ತು ಮಾನ್ಯ ಅಧ್ಯಕ್ಷರಿಗೆ ಕೂಡ ಅವರು ಕಾಗದ ಬರೆದಿದ್ದಾರೆ. ಶ್ರೀ ರೇವಣ್ಣನವರು ವಿಧಾನಪರಿಷತ್ತಿನಲ್ಲಿ ಇದ್ದಾರೆಂದು ನನಗೆ ಈಗತಾನೇ ತಿಳಿದುಬಂದಿದೆ. ಆದ್ದರಿಂದ ಅವರು ರಾಜೀನಾಮೆ ಕೊಟ್ಟಿಲ್ಲವೆಂದು ತಮಗೆಲ್ಲಾ ಗ್ಯಾರಂಟಿ ಆಗಿರಬಹುದೆಂದು ಭಾವಿಸುತ್ತೇನೆ.

(ಬ) ಆಳಂದ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ.

ಶ್ರೀ ಸುಭಾಶ್ ರುಕ್ಮಯ್ಯ ಗುತ್ತೇದಾರ್ (ಆಳಂದ) :— ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಆಳಂದ ತಾಲ್ಲೂಕಿನ ನಿಂಬರಗಾ ಗ್ರಾಮದಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚು ಇರುವುದು ಕಂಡುಬಂದಿದೆಯೆಂದು ಮೊನ್ನೆ ನಾನು ಕೆ.ಡಿ.ಪಿ. ಮೀಟಿಂಗ್ ಮಾಡುದಾಗ ಆ ಮೀಟಿಂಗ್‌ನಲ್ಲಿ ಡಾಕ್ಟರ್‌ಗಳು ಹೇಳಿದ್ದಾರೆ. ಈ ಫ್ಲೋರೈಡ್ ಅಂಶ ಜಾಸ್ತಿಯಾದ್ದರಿಂದ ಆ ನೀರನ್ನು ಕುಡಿಯತಕ್ಕಂಥ ಜನರಿಗೆ 'ಫ್ಲೋರೋಸೀಸ್'ಎನ್ನುವಂಥ ರೋಗ ಬಂದಿದೆ. ಆದ್ದರಿಂದ ಕುಡಿಯುವ ನೀರನ್ನು ಬದಲಾಯಿಸಿ ಬೇರೆ ಎಲ್ಲಿಂದಾರಾದರೂ ನೀರು ತಂದು ಪೂರೈಸಬೇಕು ಮತ್ತು ಆ ರೋಗ ಬಂದವರಿಗೆ ಏನು ಚಿಕಿತ್ಸೆ ಮಾಡುತ್ತೀರಿ ಎಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು) :— ಮಾನ್ಯ ಅಧ್ಯಕ್ಷರೆ ಸುಮಾರು ಕೊಳವೆ ಬಾವಿಗಳಿಂದ ನೀರು ಪೂರೈಕೆ ಮಾಡತಕ್ಕಂಥ ವ್ಯವಸ್ಥೆ ಮಾಡಿದಾಗ, ಭೂಮಿಯ ಒಳಪದರದ ಮೂಲಕವಾಗಿ ಈ ಫ್ಲೋರೋಡ್ ಕರೆಂಟು ಹೆಚ್ಚು ಇರತಕ್ಕಂಥ ನೀರು ಬರುತ್ತಾ ಇದೆ. ಈ ಫ್ಲೋರೈಡ್ ಅಂಶ 1.5 ಪಿ.ಪಿ.ಎಂ.ಗಿಂತ ಹೆಚ್ಚು ಇದ್ದರೆ ಅದು ಕುಡಿಯಲಿಕ್ಕೆ ಯೋಗ್ಯವಾದಂಥ ನೀರು ಅಲ್ಲಮೆಂದು ಪರಿಗಣಿಸಿದ್ದಾರೆ. ಮತ್ತು 17 ಜಿಲ್ಲೆಗಳಲ್ಲಿ ವ್ಯಾಪಕವಾದ ವಿಚಾರವನ್ನು ಕಂಡಿದ್ದೇವೆ. ತಮ್ಮ ಆಳಂದ ತಾಲ್ಲೂಕಿನ ಈ